ಪಾವಟೆ, ಸದಾಶಿವ ಒಡೆಯರ, ಜೆ.ಸಿ. ಉತ್ತಂಗಿ, ಚೆನ್ನವೀರ ಕಣವಿ, ಷ. ಶೆಟ್ಟರ್, ಕೆ.ಜೆ. ಮಹಾಲೆ, ರಾಜೀವ ತಾರಾನಾಥ, ಎಂ.ಎಸ್. ಪ್ರಭಾಕರ್, ಗಿರೀಶ ಕಾರ್ನಾಡ, ಚಂದ್ರಶೇಖರ ಪಾಟೀಲ, ಅನಿಲ ಗೋಕಾಕ, ಎಂ.ಎಂ. ಕಲಬುರ್ಗಿ, ಗಿರಡ್ಡಿ ಗೋವಿಂದರಾಜ, ವೀಣಾ ಶಾಂತೇಶ್ವರ, ಎಸ್.ಎಂ. ಜಾಮದಾರ ಮುಂತಾದವರ ಹೆಸರು ಈ ಕಾಲೇಜಿನ ಜೊತೆಗೆ ಒಂದಿಲ್ಲೊಂದು ರೀತಿಯಲ್ಲಿ ಸೇರಿಕೊಂಡಿವೆ.

ಇಡೀ ಉತ್ತರ ಕರ್ನಾಟಕ ಜನತೆಗೆ, ವಿಶೇಷವಾಗಿ ಹೆಣ್ಣುಮಕ್ಕಳಿಗೆ ಶಿಕ್ಷಣ



ಸೌಲಭ್ಯಗಳನ್ನು ಒದಗಿಸಿ, ಸಮಾಜದ ಏಳಿಗೆಗೆ ಶ್ರಮಿಸುತ್ತಿರುವ, ಶತಮಾನದ ಪೂರೈಸಿದ ಈ ಕಾಲೇಜು 1957ರವರೆಗೆ ಸರ್ಕಾರಿ ಕಾಲೇಜು ಆಗಿತ್ತು; ನಂತರ ಆಗಿನ ಉಪಕುಲಪತಿ ಡಿ.ಸಿ. ಪಾವಟೆ ಅವರು ಒಂದು ಮಾದರಿ ಸಂಸ್ಥೆಯನ್ನಾಗಿ ರೂಪಿಸುವ ಉದ್ದೇಶದಿಂದ ಸರ್ಕಾರದಿಂದ ಪಡೆದ ನಂತರ, ಆಡಳಿತಾತ್ಮಕವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಅಧೀನವಾಗಿದೆ.

ಕಲೆ, ವಿಜ್ಞಾನ, ವಾಣಿಜ್ಯ, ತಂತ್ರಜ್ಞಾನಗಳ ಎಲ್ಲ ಸಮೃದ್ಧ ವಿಭಾಗಗಳನ್ನು ಹೊಂದಿರುವ ಈ ಕಾಲೇಜಿನಲ್ಲಿರುವ ಪ್ರಾಚೀನ ಗ್ರಂಥಾಲಯ, ಬಯಲು ರಂಗಮಂದಿರ, ವಿಜ್ಞಾನ ವಿಭಾಗಗಳು, ವಿಶಾಲ ಕ್ರೀಡಾಂಗಣಗಳು, ಮತ್ತು ನಮ್ಮ ವಿದ್ಯಾರ್ಥಿಯೇ ಆಗಿದ್ದ ನಂದನ್ ನೀಲೇಕಣಿ ಕಟ್ಟಿಸಿಕೊಟ್ಟ 'ಸೃಜನಾ ರಂಗಮಂದಿರ' ಮುಂತಾದುವುಗಳನ್ನು ನೋಡುವುದೇ ಒಂದು ಹಬ್ಬ. ಇಂಥ ಕಾಲೇಜಿನಲ್ಲಿ 6 ವರ್ಷ ಕಲಿತಿದ್ದೆ, 33 ವರ್ಷ ಅಧ್ಯಾಪಕನಾಗಿದ್ದೆ ಎಂಬುದು ನನ್ನ ಜೀವನದ ಅಪೂರ್ವ ಚರಿತ್ರೆ.

## ಬಾರೋ 'ಸಾಧನಕೇರಿ'ಗೆ...

**■ ರಮಾಕಾಂತ ಜೋಶಿ**

**ದ**.ರಾ.ಬೇಂದ್ರೆ ಅವರು ಸೊಲ್ಲಾಪುರದಿಂದ ಧಾರವಾಡಕ್ಕೆ ಮರಳಿ ಬಂದು ಇಲ್ಲಿಯೇ ನೆಲೆಸಲು ನಿರ್ಧರಿಸಿದಾಗ, ಸಾಧನಕೇರಿಯಲ್ಲಿ ಅವರ ಚಿಕ್ಕಪ್ಪ ಅವರಿಗೆ ನೀಡಿದ ಮನೆಯಲ್ಲೇ ವಾಸ ಮಾಡಲು ಬಂದರು. ಅದೇ ಹೊಸ್ತಿಲಲ್ಲಿ ಅವರು ಬರೆದ ಕವನ–

ಬಾರೋ ಸಾಧನಕೇರಿಗೆ/ ಮರಳಿ ನಿನ್ನೀ ಊರಿಗೆ/ ಮಳೆಯು ಎಳೆಯುವ ತೇರಿಗೆ/ ಹಸಿರು ಏರಿದೆ ಏರಿಗೆ/ ಹಸಿರು ಚಾಚಿದೆ ದಾರಿಗೆ/ ನಂದನದ ತುಣುಕೊಂದು ಬಿದ್ದಿದೆ/ ನೋಟ ಸೇರದು ಯಾರಿಗೆ?

1920ರ ದಶಕದಲ್ಲಿ ಧಾರವಾಡದಲ್ಲಿ ಪ್ಲೇಗ್ ಆವರಿಸಿದಾಗ ಎಲ್ಲರೂ ತಮ್ಮ ವಾಸ್ತವ್ಯವನ್ನು ಸಾಧನಕೇರಿಗೆ ಬದಲಾಯಿಸಿದರು. ಇಲ್ಲಿ ಆಲೂರು ವೆಂಕಟರಾಯರು, ಶಂಭಾ ಜೋಶಿ ನೆಲೆಸಿದ್ದರು. ಜಿ.ಬಿ. ಜೋಶಿ (ಜಡಭರತ) ಅವರು ಆಲೂರರ ಔಟ್‌ಹೌಸಿನಲ್ಲಿ ನೆಲೆಸಿದ್ದರು. ಬೇಂದ್ರೆ ಮನೆ ಎದುರು ಇರುವುದೇ ಸಾಧನ ಕೆರೆ. ಈ ಹೆಸರು ಹೇಗೆ ಬಂತು ಎಂಬುದು ಗೊತ್ತಿಲ್ಲ.

21ನೇ ಶತಮಾನದಲ್ಲೂ ಧಾರವಾಡ ಮತ್ತೆ ಎಲ್ಲರ ದೃಷ್ಟಿಯನ್ನು



ಸೆಳೆಯುತ್ತಿದೆ. ಸಾಹಿತ್ಯದ ದಿಗ್ಗಜರು ಮರೆಯಾದರೂ ಧಾರವಾಡದ ಮಹತ್ವ ಕಡಿಮೆಯಾಗಿಲ್ಲ. ಅದರಲ್ಲೂ ಸಾಧನಕೇರಿ ಅತ್ಯಂತ ಮಹತ್ವದ ಸಂದರ್ಶನ ಸ್ಥಳವಾಗಿ ಪರಿವರ್ತಿತವಾಗಿದೆ. ವಾಮನ ಬೇಂದ್ರೆ ಅವರು ರಾಜ್ಯ ಸರ್ಕಾರಕ್ಕೆ ನೀಡಿದ ಬೇಂದ್ರೆ ಅವರ ಮನೆಗೆ ಹೊಂದಿಕೊಂಡೇ ಇರುವ ಜಾಗದಲ್ಲಿ 'ಬೇಂದ್ರೆ ಭವನ' ತಲೆ ಎತ್ತಿ ನಿಂತಿದೆ. ಅಲ್ಲಿ ಬೇಂದ್ರೆ ಅವರ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿದೆ. ನೆಲಮಾಳಿಗೆಯಲ್ಲಿ ಚಿಕ್ಕದಾದ ಸುಂದರ ಸಭಾಭವನವಿದೆ.

ಬೇಂದ್ರೆ ವಾಸವಿದ್ದ ಮನೆ ಇದ್ದ ಹಾಗೆಯೇ ಇದೆ. ಈಗ ಅಲ್ಲಿ ಅವರ ಮೊಮ್ಮಗಳು ಪುನರ್ವಸು ಬೇಂದ್ರೆ ವಾಸವಾಗಿದ್ದಾರೆ. ಬೇಂದ್ರೆ ಅವರ ಪುಸ್ತಕ ಸಂಗ್ರಹವೆಲ್ಲ ಹುಬ್ಬಳ್ಳಿಯ ಕೆ.ಎಸ್. ಶರ್ಮಾ ಅವರ 'ಶ್ರಮ ನಿಕೇತನ'ದಲ್ಲಿ ಸುರಕ್ಷಿತವಾಗಿ ಇಡಲಾಗಿದೆ. ಬೇಂದ್ರೆ ಅವರ ಕುರಿತು ಗಿರೀಶ ಕಾರ್ನಾಡ ನಿರ್ದೇಶಿಸಿದ ಸಾಕ್ಷ್ಯಚಿತ್ರವು ಬೇಂದ್ರೆ ಭವನದಲ್ಲಿ ಆಗಾಗ ಪ್ರದರ್ಶನ ಕಾಣುತ್ತದೆ.

## ಬೆಟ್ಟದಂಥ 'ಅಟ್ಟ'ದ ಮನೋಹರ ಗ್ರಂಥಮಾಲಾ

**■ ಹ.ವೆಂ. ಕಾಖಂಡಕಿ**

**ಕ**ನ್ನಡ ಸಾಂಸ್ಕೃತಿಕ ಇತಿಹಾಸದಲ್ಲೇ ಗೆಳೆಯರ ಗುಂಪೊಂದು ಸೇರಿ ಆರಂಭಿಸಿದ ಕೇಂದ್ರವೇ 'ಮನೋಹರ ಗ್ರಂಥಮಾಲಾ'. ಜಿ.ಬಿ. ಜೋಶಿ, ಗೋವಿಂದ ಚುಳಕಿ ಮತ್ತು ಬೆಟಗೇರಿ ಕೃಷ್ಣಶರ್ಮಾ ಅವರು ಸೇರಿ 1933ರ ಆಗಸ್ಟ್ 15ರಂದು ಮನೋಹರ ಗ್ರಂಥಮಾಲಾವನ್ನು ಸ್ಥಾಪಿಸಿದರು. ಈ ಗುಂಪಿಗೆ ಸಲಹೆಗಾರರಾಗಿ